# ಪ್ರೀತಿ, ಸೌಂದರ್ಯ ಮತ್ತು ಸತ್ಯ..

**ದಕ್ಷಿಣ ಕನ್ನಡದ ಪ್ರಾದೇಶಿಕ ಪ್ರಕೃತಿಯ ಚಿತ್ರಗಳ ಮೂಲಕ ದೇಶೀಯ ಕಲಾ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಒತ್ತಿದ ಚಿತ್ರಕಲಾವಿದ ಜಿ.ಎಸ್.ಶೆಣೈ ಬಗ್ಗೆ ಅವರ ಪುತ್ರನ ಹೀಗೊಂದು ಹೆಮ್ಮೆಯ ಮೆಲುಕು...**

■ ಗುರುದಾಸ್ ಶೆಣೈ




ಪ್ರಕೃತಿ– ಜಲವರ್ಣ ಕಲಾಕೃತಿ

**ಗೋ**ಕುಲದಾಸ ಸದಾನಂದ ಶೆಣೈ ಅಂದರೆ ಚಿತ್ರಕಲಾಸಕ್ತರಿಗೆ ಗೊತ್ತಾಗುವುದು ಕಷ್ಟ; ಜಿ.ಎಸ್.ಶೆಣೈ ಎಂದರೆ 'ಓ..!' ಎಂದು ಎಲ್ಲರೂ ಕಣ್ಣರಳಿಸುತ್ತಾರೆ. ಅವರನ್ನು ನನ್ನ ಅಪ್ಪ ಎನ್ನುವುದಕ್ಕಿಂತ ಹೆಚ್ಚಾಗಿ ನಿಜವಾದ ಗೆಳೆಯ, ಫಿಲಾಸಫರ್ ಮತ್ತು ಗೈಡ್ ಎಂದರೇ ಸರಿಯಾಗುತ್ತದೆ. ಅವರು ಕಲಾಕ್ಷೇತ್ರದಲ್ಲಿ ಮಾಡಿರುವ ಕೆಲಸಗಳೆಲ್ಲ ನನಗೆ ಬೆರಗು ಹುಟ್ಟಿಸುವಂಥವು. ಅವರದು ಬಹುಮುಖಿ ಪ್ರತಿಭೆ.

ಅವರು ಪ್ರಕೃತಿಯ ಆರಾಧಕರಾಗಿದ್ದರು. ಅವರ ಕಲಾಕೃತಿಗಳಲ್ಲಿ ಅದು ಸ್ಪಷ್ಟವಾಗಿ ಕಾಣಿಸುತ್ತದೆ. ಅದಕ್ಕಿಂತ ಮುಖ್ಯವಾಗಿ ತಮ್ಮೊಳಗೇ ಆಂತರಿಕ ಪ್ರಕೃತಿಚಿತ್ರವೊಂದನ್ನು ಅವರು ಸದಾ ಒಯ್ಯುತ್ತಿದ್ದರು. ಆ ಪ್ರಕೃತಿ ಚಿತ್ರದಲ್ಲಿ ದೇವರು, ಪವಿತ್ರ ದೇವದೂತರು, ಗೌರವಾನ್ವಿತ ಪುರುಷರು, ಕಾರುಣ್ಯಮಯಿ ಮಹಿಳೆಯರು, ಸಂತುಷ್ಟ ಮಕ್ಕಳು ಮತ್ತು ಜೀವಂತಿಕೆಯ ಯುವಜನರಿದ್ದರು. ಸ್ಫೂರ್ತಿ ತುಂಬುವ ಅಧ್ಯಾಪಕರು ಮತ್ತು ಸ್ಫೂರ್ತಿ ತುಂಬಿದ ವಿದ್ಯಾರ್ಥಿಗಳಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ಪ್ರೀತಿ, ಸೌಂದರ್ಯ ಮತ್ತು ಸತ್ಯದ

(8ನೇ ಪುಟ ನೋಡಿ)



ಕಲಾವಿದ ಜಿ.ಎಸ್. ಶೆಣೈ